ಶ್ರೀ ಬಿ. ವಿಠ್ಠಲದಾಸ್ ಶೆಟ್ಟಿ.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಬೇಕು.

ಶ್ರೀ ಎಂ. ಎಂ. ಜಾಲಿನಹಟ್ಟಿ.—ಸೌತ್ ಕೆನರಾ ಮತ್ತು ನಾರ್ತ್ ಕೆನರಾದಲ್ಲಿರತಕ್ಕ ಬಾಕಿಯಲ್ಲ ಫಿಷ್ ಮಾರ್ಕೆಟಿಂಗ್ ಫೆಡರೇಷನ್ನಿನವರು ಕೊಟ್ಟಿರುವುದೂ ಕೂಡಿ ಬಂದಿದೆಯೇ ?

ಶ್ರೀ ಡಿ. ಎಸ್. ನಾಡಕರ್ಣಿ.—ಮಾನ್ಯ ಮಂತ್ರಿಗಳು ಸೆಕ್ಯೂರಿಟಿ ಇದ್ದವರಿಗೆ ಸಾಲ ಕೊಡ ಲಾಗುತ್ತದೆಂದು ಹೇಳಿದರು. ಜನರಲ್ಲಾಗಿ ಬೋಟುಗಳನ್ನು ಇಟ್ಟುಕೊಂಡು ಟ್ರೈನ್ಡ್ ಅದವರಿಗೆ ಕೊಡುತ್ತೀರೋ ಅಥವಾ ಸೆಕ್ಯೂರಿಟಿ ಕೊಟ್ಟವರಿಗೆ ಕೊಡುತ್ತೀರೋ ?

ಶ್ರೀ ಬಿ. ವಿಠ್ಠಲದಾಸ್ ಶೆಟ್ಟಿ.—ಟ್ರೈನ್ಡ್ ಅದವರಿಗೆ ಕೊಡುತ್ತೇವೆ.

ಶ್ರೀ ಡಿ. ಎಸ್. ನಾಡಕರ್ಣಿ.—ಬೋಟ್ ಸೆಕ್ಯೂರಿಟಿ ಇಟ್ಟುಕೊಂಡು ಸಾಲ ಕೊಡುತ್ತೀರಾ ?

ಶ್ರೀ ಬಿ. ವಿಠ್ಠಲದಾಸ್ ಶೆಟ್ಟಿ.—ಅಂತಹವರಿಗೆ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇವೆ.

ಶ್ರೀ ಡಿ. ಎಸ್. ಗೌಡ.—ಮಂಗಳೂರು ಪ್ರದೇಶದಲ್ಲಿ ಮೀನುಗಳು ನಪ್ಲೆಸ್ ಆಗಿವೆ. ಅಲ್ಲಿ ಒಳ್ಳೆಯ ಮೀನುಗಳು ಸಾಯುತ್ತಾ ಇವೆ, ಆದುದರಿಂದ ಸರ್ಕಾರದವರು ಅವುಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ?

ಶ್ರೀ ಬಿ. ವಿಠ್ಠಲದಾಸ್ ಶೆಟ್ಟಿ.—ನಪ್ಲೆಸ್ ಆಗಿರುವುದು ಕಾಣಲಿಲ್ಲ. ಮುಂದೆ ಆ ರೀತಿ ಅದರೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

Distribution of timber for construction of Buildings

107. **Smt. NAGAMMA** (Kalmala).—

Will the Minister for Development be pleased to state:—

(*a*) whether it is a fact that the members of the Depressed Class House Building Co-operative Societies are being given timber free of cost for construction of buildings;

(*b*) whether an arrangement will be made for taking delivery of the said timber from Government Depots by the B. D. O's. President, T. D. B. and Social Welfare Officers and to distribute the same to Harijans of the taluk ?

Sri B. L. GOWDA (Deputy Minister for Co-operation).—

(*a*) Yes.

(*b*) This is under consideration of Government.

ಶ್ರೀಮತಿ ನಾಗಮ್ಮ.—(ಅ) ಪ್ರಶ್ನೆಗೆ ಉತ್ತರವಾಗಿ ಅದಿನ್ನೂ ಸರ್ಕಾರದವರ ಪರಿಶೀಲನೆಯಲ್ಲಿದೆಯೆಂದು ಹೇಳಿದೆ. ಅದು ಯಾವ ರೀತಿ ಪರಿಶೀಲನೆಯಲ್ಲಿದೆ ?

† ಶ್ರೀ ಬಿ. ಎರ್. ಗೌಡ.—ಇಂತಹ ಯೋಜನೆ ಅರಣ್ಯ ಶಾಖೆಯಲ್ಲಿಯೂ ಇದೆ. ದಲಿತ ವರ್ಗಕ್ಕೆ ಸೇರಿದ ಪ್ರತಿಯೊಬ್ಬ ಸದಸ್ಯರಿಗೂ 200 ರೂಪಾಯಿಗಳಷ್ಟು ಬೆಳೆ ಬಾಳು ವಂಥ ಮರಮುಟ್ಟು ಗಳನ್ನು ಕೊಡುತ್ತೇವೆ. ಟಿಂಬರ್ ಡಿಪೋವಿನಿಂದ ಅವನ್ನು ತರಬೇಕಾಗಿದೆ. ತಾಲ್ಲೂಕಿನಲ್ಲರುವ ಬಿ. ಡಿ. ಓ. ಗಳು ತಾಲ್ಲೂಕು ಬೋರ್ಡ್ ಮುಖಾಂತರ ಅವನ್ನು ತಂದು ಹರಿಜನ ಸದಸ್ಯರಿಗೆ ಹಂಚು ವುದು ಯೋಗ್ಯ ಸಲಹೆಯಾಗಿದೆ. ಅದನ್ನು ಸರ್ಕಾರದವರು ಬಹಳ ಸಹಾನುಭೂತಿಯಿಂದ ಪರಿಶೀಲನೆಮಾಡಬೇಕೆಂಬ ನೀತಿಯನ್ನು ಒಪ್ಪಿಕೊಂಡಿದ್ದಾರೆ. ಆದರೆ ಅದನ್ನು ತಾಲ್ಲೂಕು ಬೋರ್ಡಿ ನವರು ಮಾಡಬೇಕೋ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರು ಮಾಡಬೇಕೋ ಅಥವಾ

ಅರಣ್ಯ ಇಲಾಖೆಯವರು ಮಾಡಬೇಕೋ ಎಂಬ ಬಗ್ಗೆ ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ಇದನ್ನು ಮೊದಲು ತಾಲ್ಲೂಕು ಬೋರ್ಡಿನವರು ಪ್ರಯತ್ನವಾಡುತ್ತಾರೆಂದು ನಾನು ಆಶ್ವಾಸನೆ ಕೊಡುತ್ತೇನೆ.

ಶ್ರೀ ಕೆ. ಎಂ. ತಮ್ಮಯ್ಯ.—ಅದನ್ನು ತಾಲ್ಲೂಕು ಬೋರ್ಡ್‌ಗಳ ಮುಖಾಂತರವಾಗಲೀ ಅಥವಾ ಪಂಚಾಯತಿ ಮೂಲಕವಾಗಲೀ ಕೊಡುವುದರಿಂದ ಅಲ್ಲಿನ ಸೆಕ್ರೆಟರಿ ಮತ್ತು ಚೇರ್‌ಮನ್ ಅವರು ಸೇರಿಕೊಂಡು ಹತ್ತಾರು ಸಾವಿರ ರೂಪಾಯಿಗಳನ್ನು ಹೊಡೆದಿದ್ದಾರೆ. ಅಂತಹವರನ್ನು ಅಲ್ಲಿಂದ ತೆಗೆಯದೆ ಕೆಲಸದಲ್ಲಿ ಹಾಗೆಯೇ ಇಟ್ಟಕೊಂಡಿದ್ದೀರಿ. ಅವರ ಮೇಲೆ ಏನು ಕ್ರಮವನ್ನು ತೆಗೆದು ಕೊಂಡಿದ್ದೀರಿ?

ಶ್ರೀ ಬಿ. ಎಲ್. ಗೌಡ.—ಮಾನ್ಯ ಸದಸ್ಯರು ಅಂಥಾದನ್ನು ಸರ್ಕಾರದ ಗಮನಕ್ಕೆ ತಂದರೆ ಅಂತಹವರುಮೇಲೆ ಶೀಘ್ರವಾಗಿ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಕೆ. ಲೀಲಾವತಿ ರೈ.—ದಲಿತ ವರ್ಗದವರಿಗೆ ಮರಮುಟ್ಟುಗಳನ್ನು ಕೊಡುವುದು ಎಷ್ಟು ವರ್ಷಗಳಿಂದ ಪೆಂಡಿಂಗ್‌ನಲ್ಲಿದೆ? ಈಗಲೂ ಉತ್ತರವಾಗಿ ಅದಿನ್ನೂ ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಹೇಳಿದ್ದೀರಿ. ಆದ್ದರಿಂದ ಈಗಲಾದರೂ ಬೇಗನೆ ಪರಿಶೀಲನೆಮಾಡುತ್ತೀರಾ? ಮೊದಲು ದೊಡ್ಡ ದೊಡ್ಡ ತುಂಡುಗಳನ್ನು ಅವರಿಗೆ ಅರಣ್ಯ ಇಲಾಖೆಯಿಂದ ಕೊಡುತ್ತಾ ಇದ್ದರು. ಆಮೇಲೆ ಯಾವುದಾದರೂ ಸರ್ಕಾರದ ಡಿಪೋನಿಂದ 200 ರೂಪಾಯಿಗಳಷ್ಟು ಬೆಲೆ ಬಾಳುವ ಮರಮುಟ್ಟುಗಳನ್ನು ಬಿ. ಡಿ. ಓ. ಅಥವಾ ತಾಲ್ಲೂಕು ಬೋರ್ಡ್ ಮುಖಾಂತರ ತರಿಸಿ ಕೊಡಬೇಕೆಂದು ನಮ್ಮ ವಿನಂತಿ ಇತ್ತು. ಅದನ್ನು ಬೇಗ ಕಾರ್ಯಗತಗೊಳಿಸಬೇಕೆಂದು ನಾನು ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಶ್ರೀ ಬಿ. ಎಲ್. ಗೌಡ.—ಆಗಲೇ ಹೇಳಿದ್ದೇನೆ. ಅದರ ಬಗ್ಗೆ ಒಂದು ನೀತಿಯನ್ನು ಒಪ್ಪಿ ಕೊಂಡಿದ್ದೇವೆ. ಟಿಂಬರ್ ಡಿಪೋವಿನಿಂದ ತಾಲ್ಲೂಕಿನ ಮುಖ್ಯ ಸ್ಥಳಕ್ಕೆ ಮರಮುಟ್ಟುಗಳನ್ನು ತರುವುದಕ್ಕೆ ಒಪ್ಪಿಕೊಂಡಿದ್ದೇವೆ. ಈ ಹಂಚಿಕೆಯನ್ನು ಬಡ್ಜೆಟ್ ಅಧಿವೇಶನದೊಳಗೇ ಕಾರ್ಯಗತ ಮಾಡುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—ಹರಿಜನ ಮತ್ತು ಗಿರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಮರಮಟ್ಟುಗಳನ್ನು ಕೊಡುವುದು ಸ್ವಾಗತಾರ್ಹ. ಆದರೆ ಈಗ ತಾಲ್ಲೂಕುಬೋರ್ಡಿಗೆ ಪರ್ಮಿಟ್ ಕೊಟ್ಟು ಬೇರೆ ಯಾರೋ ಮೂಲಕ ಬೆಂಗಳೂರು ಡಿಪೋನಿಂದ ಮರಗಳನ್ನು ತಂದು ಹಂಚಿಕೆ ಮಾಡುವುದನ್ನು ಬಿಟ್ಟು ಆಯಾ ಸ್ಥಳಗಳಲ್ಲಿಯೇ ಅವನ್ನು ತರಿಸಿ ಹಂಚುವುದು ಸೂಕ್ತವಲ್ಲವೇ?

ಶ್ರೀ ಬಿ. ಎಲ್. ಗೌಡ.—ನಾನು ಮೊದಲೇ ಹೇಳಿದ ಹಾಗೆ ತಾಲ್ಲೂಕು ಬೋರ್ಡ್‌ಗಳ ಮೂಲಕ ತರಿಸಿ ಅವನ್ನು ಅವರಿಗೆ ಹಂಚುತ್ತೇವೆ. ಅದಕ್ಕೋಸ್ಕರವೇ ತಾಲ್ಲೂಕ್‌ನಲ್ಲಿ ಸ್ಥಳದಲ್ಲಿಯೇ ತರಿಸಿ ಕೊಡಲು ಯೋಚನೆ ಮಾಡುತ್ತೇವೆಂದು, ಆ ಉದ್ದೇಶದಿಂದಲೇ ಹೇಳಿದ್ದು.

ಶ್ರೀ ಎಂ. ನಾಗಪ್ಪ.—ತಾಲ್ಲೂಕು ಅಭಿವೃದ್ಧಿ ಮಂಡಲ ಅಧ್ಯಕ್ಷರಿಗೆ ಅಥವಾ ಸೋಷಿಯಲ್ ವೆಲ್‌ಫೇರ್ ಆಫೀರಿಗೆ ಅಥವಾ ಬಿ. ಡಿ. ಓ.ಗೆ ಅಧಿಕಾರ ಕೊಡುತ್ತೇವೆ ಎಂದು ಹೇಳುತ್ತೀರಿ. ಒಂದು ವೇಳೆ ಇಂಡಿವಿಜುಯಲ್ ಹರಿಜನರು ಅದರೆ ಸರಿ. ಸೊಸೈಟಿ ಇದ್ದಂಥ ಪಕ್ಷದಲ್ಲಿ, ಇದರ ಹಂಚಿಕೆ ಯಾವ ದೃಷ್ಟಿಯಿಂದ ಸರಕಾರ ಮಾಡಬೇಕು ಎನ್ನುವಂಥದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಬಿ. ಎಲ್. ಗೌಡ.—ಇದುವರೆಗೆ ಬಿಡಿ ಹರಿಜನ ಸದಸ್ಯರು ಟಿಂಬರನ್ನು ತರಲು ಟಾನ್ಸ್‌ಪೋರ್ಟ್ ಮುಂತಾದವಕ್ಕೆ ಹೆಚ್ಚು ಖರ್ಚು ಬೀಳುವುದರಿಂದ, ಮುಫತ್ತಾಗಿ ಆಯಾಯ ತಾಲ್ಲೂಕಿನಲ್ಲಿಯೇ ಅವರಿಗೆ ಸಿಗಲು ಏರ್ಪಾಡು ಮಾಡಬೇಕೆಂದಿದ್ದೇವೆ. ಇದಕ್ಕೆ ತಗಲುವ ಖರ್ಚನ್ನು ಸೊಸೈಟಿಯವರು ವಹಿಸಿಕೊಳ್ಳಬೇಕೇ ಸೊಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ವಹಿಸಿಕೊಳ್ಳಬೇಕೇ ಯಾರು ಖರ್ಚನ್ನು ವಹಿಸಬೇಕು ಎನ್ನುವುದನ್ನು ತೀರ್ಮಾನ ಮಾಡುತ್ತೇವೆ.

ಶ್ರೀ ಬಿ. ಎಂ. ಇದ್ದಿನಬ್ಬ.—ದಲಿತ ವರ್ಗದವರು ಬಡವರು ಆಗಿರುವುದರಿಂದ ಅವರಿಗೆ ಮರ ಮುಟ್ಟು ಕೊಟ್ಟಿದ್ದರೂ, ದಳ್ಳಾಳಿಗಳು ಅದನ್ನು ಅಪಹರಿಸಿ, ಅವರಿಗೆ ಸಿಕ್ಕದಹಾಗೆ ಮಾಡಿರುವುದರಿಂದ, ಹರಿಜನರ ಮನೆ ಬಾಗಿಲಿಗೆ ಮರಮುಟ್ಟುಗಳನ್ನು ಸಾಗಿಸುವುದಕ್ಕೆ ಏರ್ಪಾಡು ಮಾಡಿದರೆ ಅವರಿಗೆ ಅದರಿಂದ ನಿಜವಾಗಿ ಉಪಯೋಗವಾಗುತ್ತದೆ ಎಂಬುದು ಸರಕಾರಕ್ಕೆ ಗೊತ್ತಿದೆಯೇ?

ಶ್ರೀ ಬಿ. ಎಲ್. ಗೌಡ.—ಕೆಲವಾರು ಸಂದರ್ಭಗಳಲ್ಲಿ ದುರುಪಯೋಗವಾಗಿರುವುದು ಸರಕಾರದ ಗಮನಕ್ಕೆ ಬಂದಿದೆ. ಆ ಲೋಪದೋಷಗಳನ್ನು ಬಗೆಹರಿಸಿ ನೇರವಾಗಿ ಅವರು ಉಪಯೋಗ ಹೊಂದಲಿ ಎನ್ನುವ ಉದ್ದೇಶದಿಂದ ಏರ್ಪಾಡು ಮಾಡಬೇಕೆಂದು ಸರಕಾರದವರು ತೀವ್ರ ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಹೆಚ್. ಸಿದ್ದವೀರಪ್ಪ.—ಇಷ್ಟು ದುರುಪಯೋಗ ಆಗತಕ್ಕ ವಿಚಾರದಲ್ಲಿ ದೂರುಗಳು ಬಂದಿವೆ ಎಂದು ಹೇಳುತ್ತಾರೆ. ಅವರಿಗೆ ಹಣ ಸಲ್ಲಬೇಕು ಎನ್ನುವ ಸದುದ್ದೇಶ ಸರಕಾರಕ್ಕೆ ಇದ್ದರೆ, ಟಿಂಬರ್ ಕೊಡುವುದಕ್ಕೆ ಬದಲು ಕಟಕಿ ಬಾಗಿಲುಗಳನ್ನು ಮಾಡಿಸಿ, ಒಬ್ಬೊಬ್ಬರಿಗೆ ಒಂದು ಬಾಗಿಲು ಎರಡು ಕಟಕಿಗಳಂತೆ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಎಲ್ ಗೌಡ.—ದುಡ್ಡು ಕೊಡುವುದಿಲ್ಲವೆಂದು ಹೇಳಿದ್ದೇವೆ. ಮರಮಟ್ಟು ಬೇಡ, ಬಾಗಿಲು ಕಟಕಿ ಕೊಡಬೇಕೆಂದು ಹೇಳಿದರೆ ಯೋಚನೆ ಮಾಡುತ್ತೇವೆ.

ಶ್ರೀ. ಎನ್. ಹುಚ್ಚಮಾಸ್ತಿಗೌಡ.—ಹರಿಜನರಿಗೆ ಮರಗಳನ್ನು ಕೊಡುವುದು ಸರಿ. ಮನೆಗಳನ್ನು ಕಟ್ಟುವುದಕ್ಕೆ ಸಾಲ ಕೊಡುವ ವ್ಯವಸ್ಥೆ ಮಾಡಿದ್ದೀರಿ. ಸಾಲದ ಮೊದಲನೆಯ ಕಂತು ಕೊಟ್ಟು, ಎರಡನೆಯ ಕಂತು ಕೊಡದೆ ಇರುವುದರಿಂದ ಫೌಂಡೇಷನ್ ಹಾಕಿ, ಅಷ್ಟಕ್ಕೇ ನಿಲ್ಲಿಸಿದ್ದಾರೆ. ಗೋಡೆಗಳು ಬೀಳುತ್ತಾ ಇವೆ. ಈ ರೀತಿ ಹಣ ಕೊಡದೆ ಇರುವ ಪರಿಸ್ಥಿತಿ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿಯೂ ಇದೆ ಎಂದು ತಿಳಿದುಬಂದಿದೆ. ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಎಲ್. ಗೌಡ.—ಅವರಿಗೆ ಸಾಲವನ್ನು ಮೈನೂರು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹೌಸಿಂಗ್ ಕಾರ್ಪೊರೇಷನ್ ಮೂಲಕ ಕೊಟ್ಟಿದ್ದೇವೆ. ಯಾರು ಯಾರು ಮನೆಗಳನ್ನು ಪೂರ್ತಿ ಮಾಡಿದ್ದಾರೋ ಅವರಿಗೆ ಹಣ ಕೊಟ್ಟಿದ್ದೇವೆ. ಯಾರು ಕೆಲಸ ಪೂರ್ತಿಯದೆ ಬಾಕಿ ಹಣ ತೆಗೆದುಕೊಳ್ಳದೆ ಇದ್ದರೆ, ಅದು ಅವರ ತಪ್ಪು, ಷೆಡ್ಯೂಲ್ ಕ್ಯಾಸ್ಟ್ ಹೌಸಿಂಗ್ ಕಾರ್ಪೊರೇಷನ್‌ನ್ನಿನವರ ತಪ್ಪಲ್ಲ. ಫಾರಷ್ಟ್ ಇಲಾಖೆಯವರು ಮರಮಟ್ಟು ಕೊಡುತ್ತಾರೆ. ಅದಕ್ಕಿಂತ ಹೆಚ್ಚಿಗೆ ಮುಫತ್ತಾಗಿ ಕೊಡುವುದಕ್ಕಾಗುವುದಿಲ್ಲ.

Sri N. CHIKKE GOWDA.—Are you going to supply wood materials at the Taluk level without asking the concerned beneficiaries to pay the transportation charges right from the depot up to the Taluk Headquarters ?

Sri B. L. GOWDA.—That is exactly our intention. We wanted to supply these free of cost at Taluk Headquarters. We are going to make that arrangement.

ಶ್ರೀ ಐ. ಸೋಮಶೇಖರಪ್ಪ.—ದಳ್ಳಾಳಿಗಳು ನಿಮ್ಮವರದವರ ಹೆಸರಿನಲ್ಲಿ ಪರ್ಮಿಟ್ ತೆಗೆದು ಕೊಂಡು ಮರಗಳನ್ನು ಗವರ್ನಮೆಂಟ್ ಸಾ ಮಿಲ್ಲಿಗೆ ಹಾಕಿದ್ದನ್ನು ಫೋಲೀಸಿನವರು ಕಂಡುಹಿಡಿದು ಎಷ್ಟು ಕೇಸು ಹಾಕಿದ್ದಾರೆ ? ಈಗ ಇರುವ ತೊಂದರೆ ತಪ್ಪಿಸುವುದಕ್ಕೆ ಸರಕಾರ ಏನು ಕ್ರಮ ತೆಗೆದು ಕೊಳ್ಳುತ್ತದೆ ?

ಶ್ರೀ ಬಿ. ಎಲ್. ಗೌಡ.—ಎಷ್ಟು ಕೇಸು ಹಾಕಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಈಗ ಇರುವ ತೊಂದರೆ ತಪ್ಪಿಸುವುದಕ್ಕಾಗಿ, ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಮರ ತಂದು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ದೊಡ್ಡಬೊರೇಗೌಡ —ಬಿ. ಡಿ. ಓ. ಮತ್ತು ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗೆ ಅವಕಾಶ ಕಲ್ಪಿಸಿಕೊಡಲು ಆಲೋಚನೆ ಮಾಡಿದ್ದೇವೆಂದು ಹೇಳಿದಿರಿ. ತಾಲ್ಲೂಕು ಬೋರ್ಡ್ ವತಿಯಿಂದ 4–5 ವರ್ಷಗಳಿಂದ ಹರಿಜನರಿಗೆ ಟಿಂಬರ್ ಕೊಟ್ಟಿದ್ದೀರಿ. ಎಷ್ಟು ಜನ ಅವನ್ನು ಮನೆಗಳ ಮೇಲೆ ಹಾಕಿದ್ದಾರೆ ? ಅದರ ಬಗ್ಗೆ ನಿಮ್ಮ ಅಧಿಕಾರಿಗಳು ಸರಕಾರಕ್ಕೆ ವರದಿ ಕೊಟ್ಟಿದ್ದಾರೆಯೇ ? ಎಷ್ಟು ಜನ ದಿಮ್ಮಿಗಳನ್ನು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರಿದ್ದಾರೆ ಎನ್ನುವ ವಿಚಾರದಲ್ಲಿ ಸರಕಾರದವರು ತನಿಖೆ ನಡೆಸುತ್ತಿದ್ದಾರೆಯೇ ?

ಶ್ರೀ ಬಿ. ಎಲ್. ಗೌಡ.—ಆ ಪ್ರಶ್ನೆಗೆ ಸಾಕಷ್ಟು ಉತ್ತರ ಕೊಟ್ಟಿದ್ದೇನೆ.

ಶ್ರೀ ಎ. ಆರ್. ಬದರೀನಾರಾಯಣ್.—ಯಾವ ಘನ ಉದ್ದೇಶದಿಂದ ನಿಮ್ಮವರ್ಗದವರಿಗೆ ಮರ ಕೊಡಬೇಕೆಂದು ಉದ್ದೇಶಿಸಿದ್ದೆಯೋ ಅದು ಸಾರ್ಥಕ ಆಗದಿಹೋದರೆ ಅದನ್ನು ಸರಿಪಡಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಬಿ. ಎಲ್. ಗೌಡ.—ಬಹುತೇಕ ಸರಕಾರದ ಉದ್ದೇಶ ಸಾಧಿಸಿದೆ. ಒಂದೆರಡು ಸಂದರ್ಭಗಳಲ್ಲಿ ಉದ್ದೇಶ ಸಾಧಿಸಿಲ್ಲ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಬಿ. ನಂಜಪ್ಪ.—ಸೊಸೈಟಿಗೆ ಮೂರೂವರೆ ಕೋಟಿ ರೂಪಾಯಿಗಳನ್ನು ಸಾಲ ಕೊಟ್ಟು ಮನೆಕಟ್ಟಿಸಿದ್ದು ಆಯಿತು. ಈಗ ಸಾವಿರಾರು ಅಪ್ಲಿಕೇಷನ್ ಬಂದು ರಿಜಿಸ್ಟ್ರಾರ್ ಆಫೀಸಿನಲ್ಲಿ ಬಿದ್ದುಹೋಗಿದೆ. ಅವಕ್ಕೆ ಸಾಲಕೊಡುತ್ತಿರಾ ?

ಶ್ರೀ ಬಿ. ಎಲ್. ಗೌಡ.—ಇನ್ನೊಂದು ಮೂರು ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನಮ್ಮ ಸರಕಾರದವರು ಎಲ್. ಐ. ಸಿ. ಯವರನ್ನು ಅಪ್ರೋಚ್ ಮಾಡಿದ್ದಾರೆ. ಹಣ ಮಂಜೂರು ಆದ ತಕ್ಷಣ ಕೊಡುತ್ತೇವೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಸರಕಾರದ ಸಮಾಚಾರ ನನಗೆ ಅರ್ಥವಾಗುವುದಿಲ್ಲ. ಒಂದೇ ಸಮನೆ 3-4 ವರ್ಷಗಳಿಂದ ಮರಮುಟ್ಟು ದುರುಪಯೋಗವಾಗುತ್ತಿದೆ, ಬಡಜನರಿಗೆ ಮರಮುಟ್ಟು ಸೇರುತ್ತಾ ಇಲ್ಲ ಎಂದು ಹೇಳುತ್ತಾ ಇದ್ದರೂ, ದಳ್ಳಾಳಿಗಳನ್ನು ತೃಪ್ತಿ ಪಡಿಸುವುದಕ್ಕೋಸ್ಕರ ಸಂಬಂಧಪಟ್ಟ ಮಂತ್ರಿಗಳು ಈ ಮೂರುಗಳ ಕಡೆ ಗಮನ ಕೊಡದೆ ಕಾಲಹರಣ ಮಾಡುತ್ತಾ ಇದ್ದಾರೆ. ದಯವಿಟ್ಟು ಈಗಲಾದರೂ ಕೂಡ ಇದನ್ನು ಪರಿಶೀಲನೆಮಾಡಿ, ದುರುಪಯೋಗವಾಗುವುದನ್ನು ನಿಲ್ಲಿಸುವುದಕ್ಕೆ ಸರಕಾರಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಬಿ. ಎಲ್. ಗೌಡ.—ಸರಕಾರದ ಉದ್ದೇಶವಾದರೂ ಕೂಡ ದಳ್ಳಾಳಿಗಳಿಗೆ ಉಪಯೋಗವಾಗುವ ರೀತಿಯಲ್ಲಿ ಮಾಡಬೇಕು ಎಂದಲ್ಲ. ಕೆಲವು ಸಂದರ್ಭಗಳಲ್ಲಿ ಆ ರೀತಿ ಆಗಿದೆ. ಅವರ ಮೇಲೆ ಕೇಸು ನಡೆಯುತ್ತಾ ಇದೆ. ದುರುಪಯೋಗವನ್ನು ತಪ್ಪಿಸುವುದಕ್ಕೆ ಆದಷ್ಟು ಪ್ರಯತ್ನ ಮಾಡುತ್ತೇವೆ.

Sri G. CHANDRAKANTH.—May I know which of the depots cater to the needs of Hyderabad Karnatak Harijans living in Bidar and Raichur ?

Sri B. L. GOWDA.—We are going to supply timber to taluk headquarters. If that decision is taken, whether it is to Hyderabad Karnatak or Bombay Karnatak, whichever it is, we will supply.

ಶ್ರೀ ಕೆ. ಹೆಡ್. ಪಾಟೀಲ್.—ಹೌಸಿಂಗ್ ಸಲುವಾಗಿ ಮಂಜೂರು ಮಾಡಿದಂಥ ಹಣವನ್ನು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಅಧ್ಯಕ್ಷರು ಅದಕ್ಕೆ ಏನಿಯೋಗ ಮಾಡದೆ ಹಾಗೆ ಇಟ್ಟುಕೊಂಡು ಹರಿಜನರಿಗೆ ಅನ್ಯಾಯ ಮಾಡಿರುವ ವಿಷಯ ಸರಕಾರ ಪರಿಶೀಲನೆ ಮಾಡಿದ್ದಾರೆಯೇ ? ಪರಿಶೀಲನೆ ಮಾಡಿದ್ದರೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿದ್ದಾರೆ ?

ಶ್ರೀ ಬಿ. ಎಲ್. ಗೌಡ.—ಅಂಥ ಸಂದರ್ಭ ನಮ್ಮ ಜನರಿಗೆ ಬಂದರೆ, ಖಂಡಿತ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಎಂ ಎಚ್. ಜಯಪ್ರಕಾಶ್ ನಾರಾಯಣ.—ಈ ಮರಗಳು ದುರುಪಯೋಗವಾಗುತ್ತಿವೆ ಎಂದು ಹೋದ ಸಾಲಿನಲ್ಲಿ ಸಮಾಜ ಕಲ್ಯಾಣ ಶಾಖೆಯ ಮಂತ್ರಿಗಳ ಚೇಂಬರ್‌ನಲ್ಲಿ ಅರಣ್ಯ ಮಂತ್ರಿಗಳೂ ಇದ್ದರು ಇದನ್ನು ಆಯಾಯಾ ತಾಲ್ಲೂಕು ಹೆಡ್‌ಕ್ವಾರ್ಟರ್‌ನಲ್ಲಿ ಕೊಡಬೇಕೆಂದು ಲೆಜಿಸ್ಲೇಟರ್ಸ್‌ನ್ನೆಲ್ಲಾ ಕರೆದು ತೀರ್ಮಾನ ಕೈಕೊಂಡರು, ಆ ತೀರ್ಮಾನವನ್ನು ಕಾರ್ಯಗತ ಮಾಡದೇ ಇರುವುದಕ್ಕೆ ಕಾರಣವೇನು ?

ಶ್ರೀ ಬಿ. ಎಲ್. ಗೌಡ.—ಆ ಒಂದು ಸಭೆಯು ಫಲಿತಾಂಶವಾಗಿಯೇ ಈಗ ತೀರ್ಮಾನ ತೆಗೆದು ಕೊಳ್ಳುತ್ತಾ ಇರುವುದು.

Sri D. B. KALMANKAR.—May I know how many depots are there which are nearest to the Hyderabad Karnatak area ?

Sri B. L. GOWDA.—That information is not available.